# ಜಾಕಿಯಾದ ಕಿರಣ್ ರಾಜ್



ಕಿರುತೆರೆ, ಹಿರಿತೆರೆ ಎರಡರ ನಡುವೆಯೂ ಜೀಕುತ್ತಿರುವ ನಟ ಕಿರಣ್ ರಾಜ್ ಅಭಿನಯದ ಹೊಸ ಸಿನಿಮಾ ಘೋಷಣೆಯಾಗಿದ್ದು, ಸದ್ಯದಲ್ಲೇ ಚಿತ್ರೀಕರಣ ಶುರುವಾಗಲಿದೆ. ಕಿರುತೆರೆಯಲ್ಲಿ 'ಕರ್ಣ'ನಾಗಿ ಕಾಣಿಸಿಕೊಳ್ಳುತ್ತಿರುವ ಅವರು 'ಜಾಕಿ 42' ಸಿನಿಮಾ ಚಿತ್ರೀಕರಣಕ್ಕೂ ಅಣಿಯಾಗುತ್ತಿದ್ದಾರೆ.

'ರಾನಿ' ಚಿತ್ರ ನಿರ್ದೇಶಕ ಗುರುತೇಜ್ ಶೆಟ್ಟಿ ನಿರ್ದೇಶನದಲ್ಲಿಯೇ ಈ ಸಿನಿಮಾ ಕೂಡ ಮೂಡಿಬರುತ್ತಿದ್ದು, ಚಿತ್ರದ ಫಸ್ಟ್‌ಲುಕ್ ಅನ್ನು ಕಿರಣ್ ರಾಜ್ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ.

ಎರಡು ವರ್ಷಗಳ ನಂತರ ಧಾರಾವಾಹಿಗೆ ಮರಳಿರುವ ಕುರಿತು ಖುಷಿಯಿಂದ ಮಾತನಾಡಿರುವ ಕಿರಣ್, 'ಈ ಧಾರಾವಾಹಿಯಲ್ಲಿ ನನ್ನದು ಸ್ಟ್ರಾಂಗ್ ಪಾತ್ರ. ವೀಕ್ಷಕರೊಂದಿಗೆ ಮತ್ತೆ ಒಂದಾಗಲು ಕಿರುತೆರೆಗೆ ಬರುತ್ತಿರುವುದು ಖುಷಿಯಾಗಿದೆ' ಎಂದಿದ್ದಾರೆ.

ನಾಲ್ಕು ಸಿನಿಮಾಗಳ ನಡುವೆ ಕಿರುತೆರೆಯಲ್ಲಿಯೂ ತೊಡಗಿಕೊಂಡಿರುವ ಕುರಿತು ಮಾತನಾಡಿ, 'ನನಗೆ ಕೆಲಸ ಎಂದರೆ ಇಷ್ಟ. ಅವಕಾಶಗಳಿಗೆ ನಾನು ಆಭಾರಿಯಾಗಿದ್ದೇನೆ. ಇಪ್ಪತ್ತು ದಿನ ಸಿನಿಮಾ ಕೆಲಸದಲ್ಲಿದ್ದರೆ, ಉಳಿದ ದಿನ ಸೀರಿಯಲ್‌ಗಳಿಗೆ ಮೀಸಲಿಟ್ಟಿದ್ದೇನೆ. ಟೀವಿ–ಸಿನಿಮಾ ಎರಡರಲ್ಲೂ ನನ್ನ ಅಪ್ರೋಚ್ ಬೇರೆ ರೀತಿಯೇ ಇರುತ್ತದೆ. ಪ್ರತಿ ಮಾಧ್ಯಮದ ಪ್ರೇಕ್ಷಕರದ್ದೂ ನಿರೀಕ್ಷೆ ಭಿನ್ನವಾಗಿರುತ್ತದೆ' ಎಂದಿದ್ದಾರೆ.

ಸಿನಿಮಾರಂಗದ ಕುರಿತು ಮಾತನಾಡಿ, 'ಮ್ಯಾಜಿಕ್ ಶಾರ್ಟ್‌ಕಟ್ ಎಂಬುದು ಇಲ್ಲಿಲ್ಲ. ಕೆಲಸ ಮಾಡುತ್ತಿರುತ್ತೇನೆ. ಈಗ ಆಯ್ಕೆಗಳನ್ನು ಸ್ಮಾರ್ಟ್ ಆಗಿ ಮಾಡುತ್ತೇನೆ. ಯಾವುದೇ ಒಂದು ಪ್ರಕ್ರಿಯೆಯನ್ನು ನಂಬುವುದು ನನಗೆ ಭರವಸೆಯನ್ನೇ ತುಂಬಿದೆ. ಕ್ರಮೇಣ ನನ್ನ ದಾರಿಯನ್ನು ತಲುಪುವ ವಿಶ್ವಾಸವಿದೆ' ಎಂದು ಭರವಸೆ ವ್ಯಕ್ತಪಡಿಸಿದ್ದಾರೆ.





# ಅರ್ಚನಾ ಚಿತ್ತ ಪಾತ್ರ ವೈವಿಧ್ಯದತ್ತ

'ಭಾವನಾತ್ಮಕವಾಗಿ ಆವರಿಸುವ ಪಾತ್ರಗಳು ನನ್ನನ್ನು ಸೆಳೆಯುತ್ತವೆ. ಪಾತ್ರಗಳಲ್ಲಿ ವೈವಿಧ್ಯವಿರಬೇಕು. ಇಂಥ ಸ್ಪರ್ಧೆಯ ನಡುವೆ ಮಹಿಳಾ ಪ್ರಧಾನ ಪಾತ್ರಗಳು ದೊರೆಯುತ್ತಿರುವುದು ಖುಷಿಯ ಸಂಗತಿಯೂ ಹೌದು' ಎಂದಿದ್ದಾರೆ ನಟಿ ಅರ್ಚನಾ ಜೋಯಿಸ್.

ಇತ್ತೀಚೆಗೆ ಬಿಡುಗಡೆಯಾದ 'ಯುದ್ಧಕಾಂಡ 2' ಸಿನಿಮಾದಲ್ಲಿ ಕಾಣಿಸಿಕೊಂಡಿದ್ದ ನಟಿ ಅರ್ಚನಾ ಜೋಯಿಸ್, ತಮ್ಮಲ್ಲಿರುವ ಪಾತ್ರಾಭಿಲಾಷೆ ಕುರಿತು ಮಾತನಾಡಿದ್ದಾರೆ. ಮಹಿಳಾ ಪ್ರಧಾನ ಪಾತ್ರಗಳು, ಮಹಿಳಾ ಕೇಂದ್ರಿತ ಸಿನಿಮಾಗಳ ಕುರಿತು ಮಾತನಾಡಿದ್ದಾರೆ.

'ಕೆಜಿಎಫ್' ಸಿನಿಮಾದಲ್ಲಿ ರಾಕಿಭಾಯ್ ತಾಯಿ ಪಾತ್ರದಲ್ಲಿ ಮಿಂಚಿದ್ದ ಅರ್ಚನಾ, ಆ ಇಮೇಜ್‌ನಿಂದ ಹೊರಬರುವ ಪ್ರಯತ್ನದಲ್ಲಿದ್ದು, ಟೈಪ್‌ಕಾಸ್ಟ್ ಆಗುವ ಅಪಾಯದ ಅರಿವಿರುವುದಾಗಿಯೂ ಹೇಳಿದ್ದಾರೆ. 'ಒಂದೇ ರೀತಿಯ ಪಾತ್ರಗಳಿಗೆ ಸೀಮಿತವಾಗಿಬಿಡುವ ಅಪಾಯ ಕಲಾವಿದರಿಗೆ ಇರುತ್ತದೆ. ಆದರೆ ಅದನ್ನು ಮೀರುವ ಅವಕಾಶಗಳೂ ಹೆಚ್ಚು ಸೃಷ್ಟಿಯಾಗಬೇಕಿದೆ' ಎಂದ್ದಾರೆ.

'ಯುದ್ಧಕಾಂಡ ಸಿನಿಮಾದಲ್ಲಿ ಒಂದು ಪ್ರಮುಖ ಪಾತ್ರ ನನ್ನದು. ಇಂಥ ಪ್ರಬಲ ಪಾತ್ರಗಳನ್ನು ಪಡೆಯುವುದು ಒಂದು ಅದೃಷ್ಟ. ಅದೂ ಉತ್ತಮ ಪಾತ್ರಗಳಿಗೆ ಸ್ಪರ್ಧೆ ಇರುವ ಈ ಸಮಯದಲ್ಲಿ ನನಗೆ ಅಂಥ ಪಾತ್ರಗಳು ಸಿಗುತ್ತಿರುವುದು ಖುಷಿ ವಿಷಯ. ಆದರೆ ಒಂದೇ ರೀತಿಯ ಪಾತ್ರಗಳ ನಡುವೆಯೇ ಸಿಲುಕಿಬಿಡುವ ಆತಂಕವಿದೆ. ಹೀಗಿದ್ದೂ ಕೆಲವು ಗಂಭೀರ ವಿಷಯಗಳ ಸಿನಿಮಾಗಳಿಗೆ ಮೌಲ್ಯ ತಂದುಕೊಡುವಂತಿದ್ದರೆ ಅಂಥ ಪಾತ್ರಗಳನ್ನು ಮಾಡಲು ಕಥೆಯೇ ಪ್ರೇರೇಪಿಸುತ್ತದೆ' ಎಂದಿದ್ದಾರೆ.

'ಮಹಿಳಾಪ್ರಧಾನ ಸಿನಿಮಾ ಹಾಗೂ ಮಹಿಳಾ ಕೇಂದ್ರಿತ ಪಾತ್ರಗಳು ಮಾತ್ರವಲ್ಲ, ಮಹಿಳಾ ದೃಷ್ಟಿಕೋನವಿರುವ ಕಮರ್ಷಿಯಲ್ ಸಿನಿಮಾಗಳ ಸಂಖ್ಯೆಯೂ ಹೆಚ್ಚಬೇಕಿದೆ. ಅಂಥ ಪ್ರಯತ್ನಗಳು ಇನ್ನಷ್ಟು ನಡೆಯಬೇಕಿದೆ' ಎಂದು ತಮ್ಮ ಅಭಿಪ್ರಾಯ ಹಂಚಿಕೊಂಡಿದ್ದಾರೆ.

